ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	: 455
ಸದಸ್ಯರ ಹೆಸರು	: ಶ್ರೀ ವಿಜಯ ಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ	: 10/12/2020
ಉತ್ತರಿಸುವ ಸಚಿವರು	: ಮಾನ್ಯ ಗೃಹ ಸಚಿವರು

ಪ್ರಶ್ನೆ	ಉತ್ತರ
ಅ) ಬೀದರ್ ಹೊರವಲಯದಲ್ಲಿ ಹೊಸ ಜಿಲ್ಲಾ ಕಾರಾಗೃಹ ನಿರ್ಮಾಣಕ್ಕೆ ಸರ್ಕಾರ ರೂ.100 ಕೋಟಿ ಮಂಜೂರು ಮಾಡಿದ್ದು, ಕಾರಾಗೃಹದ ಕಾಮಗಾರಿ ಪ್ರಾರಂಭವಾಗಿದೆಯೇ; ಪ್ರಾರಂಭವಾಗಿದ್ದಲ್ಲಿ ಯಾವ ಹಂತದಲ್ಲಿದೆ?	ಸರ್ಕಾರಿ ಆದೇಶ ಸಂಖ್ಯೆ: ಹೆಚ್‌ಡಿ 73 ಪಿಆರ್‌ಎ 2019, ದಿನಾಂಕ: 03/09/2020ರಲ್ಲಿ ಬೀದರ್ ಹೊರ ವಲಯದಲ್ಲಿ 1000 ಸಂಖ್ಯೆಯ ಬಂದಿಗಳ ಸಾಮರ್ಥ್ಯದ ನೂತನ ವಿಶಿಷ್ಟ ಕೇಂದ್ರ ಕಾರಾಗೃಹವನ್ನು (ವಸತಿಯೇತರ) ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮ, ನಿಯಮಿತ ಬೆಂಗಳೂರು, ಇವರಿಂದ ರೂ.9995.42 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಿದೆ. ಪ್ರಸ್ತುತ ಕಾಮಗಾರಿಯ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.

ಸಂಖ್ಯೆ: ಹೆಚ್ ಡಿ 186 ಪಿಆರ್ ಎ 2020

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ವಿಜಯ್ ಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 455ಕ್ಕೆ ಪೂರಕ ಟಿಪ್ಪಣಿ

ಬೀದರ್ ಜಿಲ್ಲಾ ಕಾರಾಗೃಹವು 1920 ರಲ್ಲಿ ನಿರ್ಮಾಣಗೊಂಡಿದ್ದು, ಪ್ರಸ್ತುತ ಕಾರಾಗೃಹದ ಸುತ್ತಲೂ ಖಾಸಗಿ ಕಟ್ಟಡಗಳನ್ನು ನಿರ್ಮಿಸಿರುವುದರಿಂದ ಕಾರಾಗೃಹದ ಭದ್ರತೆಗೆ ಧಕ್ಕೆ ಉಂಟಾಗುವುದರಿಂದ, ನೂತನ ಕಾರಾಗೃಹ ನಿರ್ಮಾಣಕ್ಕೆ ಜಿಲ್ಲಾಡಳಿತವು ಆದೇಶ ಸಂಖ್ಯೆ: ಕಂ/ಎಲ್ಎನ್‌ಡಿ/ಸಿಆರ್-155/2011-12, ದಿನಾಂಕ: 08/08/2012ರಲ್ಲಿ ಬೀದರ್ ತಾಲ್ಲೂಕು ಕೋಳಾರ(ಬಿ) ಗ್ರಾಂದ ಸರ್ವೆ ನಂ.23 ರಲ್ಲಿ 49 ಎಕರೆಯನ್ನು ಮಂಜೂರು ಮಾಡಿದೆ.

ಬೀದರ್ ಜಿಲ್ಲಾ ಕಾರಾಗೃಹವನ್ನು 116 ಬಂದಿಗಳ ಸಾಮರ್ಥ್ಯಕ್ಕೆ ಅನುಗುಣವಾಗಿ ನಿರ್ಮಿಸಲಾಗಿದ್ದು, ಪ್ರಸ್ತುತ ಸರಾಸರಿ 200ಕ್ಕಿಂತಲೂ ಅಧಿಕ ವಿಚಾರಣಾ ಬಂದಿಗಳು ದಾಖಲಾಗುತ್ತಿರುವುದರಿಂದ ಸ್ಥಳಾವಕಾಶ ಮತ್ತು ಮೂಲಭೂತ ಸೌಲಭ್ಯಗಳ ಕೊರತೆಯಿದೆ. ಬೀದರ್ ಜಿಲ್ಲಾ ಕಾರಾಗೃಹದಲ್ಲಿನ ವಿಚಾರಣಾ ಬಂದಿಗಳು ಶಿಕ್ಷೆಗೆ ಒಳಗಾದಲ್ಲಿ ಗುಲ್ಬರ್ಗಾ ಕೇಂದ್ರ ಕಾರಾಗೃಹಕ್ಕೆ ಸ್ಥಳಾಂತರಿಸಲಾಗುತ್ತಿದ್ದು, ಸದರಿ ಗುಲ್ಬರ್ಗಾ ಕೇಂದ್ರ ಕಾರಾಗೃಹದಲ್ಲಿಯೂ ಬಂದಿಗಳ ಸಂಖ್ಯೆ ಅಧಿಕೃತ ಸಾಮರ್ಥ್ಯಕ್ಕಿಂತ ಹೆಚ್ಚಾಗುತ್ತಿರುವುದರಿಂದ ಅಲ್ಲಿಯೂ ಸ್ಥಳಾವಕಾಶದ ಕೊರತೆಯಿರುತ್ತದೆ.

ಗೌ॥ ಸರ್ವೋಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 406/2013 ಮತ್ತು ಗೌ॥ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 24898/2018ರಲ್ಲಿ ಕಾರಾಗೃಹಗಳ ಬಂದಿಗಳ ದಟ್ಟಣೆ ಕಡಿಮೆಗೊಳಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಆದೇಶ ನೀಡಿರುತ್ತದೆ. ಈ ಹಿನ್ನಲೆಯಲ್ಲಿ ಬೀದರ್ ಜಿಲ್ಲೆಯಲ್ಲಿ 1000 ಬಂದಿಗಳ ಸ್ಥಳಾವಕಾಶವಿರುವ ಕೇಂದ್ರ ಕಾರಾಗೃಹವನ್ನು ನಿರ್ಮಿಸಲು ಯೋಜಿಸಲಾಗಿದ್ದು, 2019-20ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ಆಯವ್ಯಯ ಭಾಷಣದ ಕಂಡಿಕೆ : 317ರಲ್ಲಿ ಬೀದರ್‌ನಲ್ಲಿ ರೂ. 100.00ಕೋಟಿಗಳ ಯೋಜನಾ ವೆಚ್ಚದಲ್ಲಿ 1000 ಬಂದಿಗಳ ಸಾಮರ್ಥವುಳ್ಳ ಪ್ರತ್ಯೇಕ ವಿಶಿಷ್ಟ ಕೇಂದ್ರ ಕಾರಾಗೃಹ ನಿರ್ಮಾಣ ಮಾಡುವುದಾಗಿ ಘೋಷಿಸಲಾಗಿದೆ.

ಅದರಂತೆ ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 73 ಪಿಆರ್‌ಎ 2019, ದಿನಾಂಕ: 03/09/2020ರಲ್ಲಿ ಬೀದರ್ ಹೊರ ವಲಯದಲ್ಲಿ 1000 ಸಂಖ್ಯೆಯ ಬಂದಿಗಳ ಸಾಮರ್ಥ್ಯದ ನೂತನ ವಿಶಿಷ್ಟ ಕೇಂದ್ರ ಕಾರಾಗೃಹವನ್ನು (ವಸತಿಯೇತರ) ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ ಬೆಂಗಳೂರು, ಇವರಿಂದ ರೂ.9995.42 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಿದ್ದು, ಪ್ರಸ್ತುತ ಕಾಮಗಾರಿಯ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.

ಮುಂದುವರೆದು, ಕರ್ನಾಟಕ ರಾಜ್ಯದಲ್ಲಿ ನೂತನವಾಗಿ ನಿರ್ಮಿಸಲಾಗುತ್ತಿರುವ ಕಾರಾಗೃಹಗಳ ವಿವರವನ್ನು ಇದರೊಂದಿಗೆ ಅನುಬಂಧಿಸಿದೆ.

ಅನುಬಂಧ

ಕರ್ನಾಟಕ ರಾಜ್ಯದಲ್ಲಿ ನೂತನವಾಗಿ ನಿರ್ಮಿಸಲಾಗುತ್ತಿರುವ ಕಾರಾಗೃಹಗಳ ವಿವರ

(ದಿನಾಂಕ: **7-12-2020** ರವರೆಗೆ)

ಕ್ರ. ಸಂ.	ಯೋಜನೆಯ ಹೆಸರು ಮತ್ತು ಸ್ಥಳ	ಆಡಳಿತಾತ್ಮಕ ಮಂಜೂರಾತಿ ನೀಡಿದ ವರ್ಷ	ಒಟ್ಟು ಅಂದಾಜು ವೆಚ್ಚ (ರೂ. ಕೋಟಿಗಳಲ್ಲಿ)	ಕಾರಾಗೃಹದ ಅಧಿಕೃತ ಸಾಮರ್ಥ್ಯ	31-3-2020 ರವರೆಗೆ ಬಿಡುಗಡೆ ಗೊಳಿಸಲಾಗಿರುವ ಅನುದಾನ (ರೂ. ಕೋಟಿಗಳಲ್ಲಿ)	ಪ್ರಸಕ್ತ ಸಾಲಿನಲ್ಲಿ ನಿಗಧಿಪಡಿಸಿ ಕೊಂಡಿರುವ ಅನುದಾನ (ರೂ. ಕೋಟಿಗಳಲ್ಲಿ)	ಕಾಮಗಾರಿ ಅನುಷ್ಠಾನ ಗೊಳಿಸುವ ಇಲಾಖೆ	ಕಾಮಗಾರಿಯ ಪ್ರಸ್ತುತ ಹಂತ
1.	ಮಂಗಳೂರಿನ ಭಂಟ್ವಾಳದಲ್ಲಿ ನೂತನ ಕೇಂದ್ರ ಕಾರಾಗೃಹ ನಿರ್ಮಾಣ	2018-19 (1-3-2019)	110.00	1100	33.00	ಇಲ್ಲ	PWD	ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.
2.	ಬೆಂಗಳೂರು ಕೇಂದ್ರ ಕಾರಾಗೃಹದ ಆವರಣದಲ್ಲಿ ನೂತನ ಗರಿಷ್ಠ ಭದ್ರತಾ ಕಾರಾಗೃಹ ನಿರ್ಮಾಣ	2018-19 (30-3-2020)	100.00	1000	ಇಲ್ಲ	30.00	KSPH & IDCL	KSPH& IDCL ರವರಿಂದ ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.
3.	ವಿಜಯಪುರದಲ್ಲಿ ನೂತನ ಕೇಂದ್ರ ಕಾರಾಗೃಹ ನಿರ್ಮಾಣ	2019-20 (30-3-2020)	99.98	1000	ಇಲ್ಲ	30.00	KSPH & IDCL	KSPH & IDCL ರವರಿಂದ ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.
4.	ಬೀದರ್‌ನಲ್ಲಿ ನೂತನ ಕೇಂದ್ರ ಕಾರಾಗೃಹ ನಿರ್ಮಾಣ	2020-21 (3-9-2020	99.95	1000	ಇಲ್ಲ	10.00	KSPH & IDCL	KSPH & IDCL ರವರಿಂದ ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.
5.	ಹಾಸನ ಜಿಲ್ಲೆ ಅರಸೀಕೆರೆ ತಾಲ್ಲೂಕಿನಲ್ಲಿ ನೂತನ ತಾಲ್ಲೂಕು ಕಾರಾಗೃಹ ನಿರ್ಮಾಣ	2019-20 (13-1-2020)	9.00	50	3.00	ಇಲ್ಲ	KSPH & IDCL	ಟೆಂಡರ್ ಪ್ರಕ್ರಿಯೆಯನ್ನು ಅಂತಿಮಗೊಳಿಸಿ KSPH & IDCL ರವರು ಕಾರ್ಯಾದೇಶ ನೀಡಿರುತ್ತಾರೆ.

..2..

ಕ್ರ ಸಂ.	ಯೋಜನೆಯ ಹೆಸರು ಮತ್ತು ಸ್ಥಳ	ಆಡಳಿತಾತ್ಮಕ ಮಂಜೂರಾತಿ ನೀಡಿದ ವರ್ಷ	ಒಟ್ಟು ಅಂದಾಜು ವೆಚ್ಚ (ರೂ. ಕೋಟಿಗಳಲ್ಲಿ)	ಕಾರಾಗೃಹದ ಅಧಿಕೃತ ಸಾಮರ್ಥ್ಯ	31-3-2020 ರವರೆಗೆ ಬಿಡುಗಡೆ ಗೊಳಿಸಲಾಗಿರುವ ಅನುದಾನ (ರೂ. ಕೋಟಿಗಳಲ್ಲಿ)	ಪ್ರಸಕ್ತ ಸಾಲಿನಲ್ಲಿ ನಿಗಧಿಪಡಿಸಿ ಕೊಂಡಿರುವ ಅನುದಾನ (ರೂ. ಕೋಟಿಗಳಲ್ಲಿ)	ಕಾಮಗಾರಿ ಅನುಷ್ಠಾನ ಗೊಳಿಸುವ ಇಲಾಖೆ	ಕಾಮಗಾರಿಯ ಪ್ರಸ್ತುತ ಹಂತ
6.	ಮಡಿಕೇರಿ ಜಿಲ್ಲೆ ವಿರಾಜಪೇಟೆ ತಾಲ್ಲೂಕಿನಲ್ಲಿ ನೂತನ ತಾಲ್ಲೂಕು ಕಾರಾಗೃಹ ನಿರ್ಮಾಣ	2017-18 (26-5-2017)	4.50	80	1.35	3.00	PWD	ಪ್ರಸ್ತುತ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.
7.	ಉತ್ತರ ಕನ್ನಡ ಜಿಲ್ಲೆ ಹಳಿಯಾಳ ತಾಲ್ಲೂಕಿನಲ್ಲಿ ನೂತನ ತಾಲ್ಲೂಕು ಕಾರಾಗೃಹ ನಿರ್ಮಾಣ	2016-17 (16-11-2016)	6.08	100	6.08	ಇಲ್ಲ	PWD	ಕಾಮಗಾರಿಯು ಪೂರ್ಣಗೊಳ್ಳುವ ಹಂತದಲ್ಲಿದೆ.
8.	ಬಳ್ಳಾರಿ ಜಿಲ್ಲೆ ಹರಪ್ಪನಹಳ್ಳಿ ತಾಲ್ಲೂಕಿನಲ್ಲಿ ನೂತನ ತಾಲ್ಲೂಕು ಕಾರಾಗೃಹ ನಿರ್ಮಾಣ	2013-14 (12-2-2014)	3.96	100	3.96	ಇಲ್ಲ	PWD	ಕಾಮಗಾರಿಯು ಪೂರ್ಣಗೊಳ್ಳುವ ಹಂತದಲ್ಲಿದೆ